
೨

ಅಕೆಡೆಮಿಕ್ ರೈಟಿಂಗ್: ಹ್ಯಾಂಡ್‌ಬುಕ್ ಫಾರ್ ಇಂಟರ್‌ನ್ಯಾಷನಲ್ ಸ್ಟೂಡೆಂಟ್ಸ್– ಸ್ಟೀಫನ್ ಬೈಲಿ

–ರಾಜೇಶ್ ಕುಮಾರ್



ಲೇಖಕರು: ಸ್ಟೀಫನ್ ಬೈಲಿ
ವರ್ಷ: 2010
ಪ್ರಕಟಣೆ: ಲಂಡನ್ ರೌಟಲೆಜ್ ಪೇಪರ್ ಬ್ಯಾಕ್
ಐಎಸ್‌ಬಿಎನ್:10: 0– 415–38420–6, pp. 260)

Academic Writing: A Handbook for International Students by Bailey, Stephen

ಪುಸ್ತಕ: ಅಕೆಡೆಮಿಕ್ ರೈಟಿಂಗ್: ಹ್ಯಾಂಡ್‌ಬುಕ್ ಫಾರ್ ಇಂಟರ್‌ನ್ಯಾಷನಲ್ ಸ್ಟೂಡೆಂಟ್ಸ್ (ಶೈಕ್ಷಣಿಕ ಬರವಣಿಗೆ: ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗಾಗಿ ಒಂದು ಕೈಪಿಡಿ)

ಸಾರಾಂಶ: ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ತೊಡಗಿರುವ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಬರವಣಿಗೆಯನ್ನು ಮಾಡುವುದು ಹೇಗೆ ಎಂಬುದನ್ನು ಈ ಕೈಪಿಡಿ ವಿವರಿಸುತ್ತದೆ. ಇಂಗ್ಲಿಷನ್ನು ಮಾತನಾಡದ ಅಥವಾ ಸ್ಥಳೀಯವಾಗಿ ಇಂಗ್ಲಿಷನ್ನು ಮಾತನಾಡುವವರಲ್ಲಿ ಕಾಣುವಂತಹ ನೈಪುಣ್ಯವನ್ನು ಹೊಂದಿರದ ವಿದ್ಯಾರ್ಥಿಗಳು ಕೋರ್ಸಿನ ಅವಧಿಯಲ್ಲಿ ಯೋಜನಾ ವರದಿ, ಪ್ರೌಢ ಪ್ರಬಂಧಗಳಂತಹ ಅನೇಕ ಶೈಕ್ಷಣಿಕ ಬರವಣಿಗೆಗಳನ್ನು ತಯಾರಿಸಿ ಸಲ್ಲಿಸಬೇಕಾಗುತ್ತದೆ. ಅಂತಹ ಬರವಣಿಗೆಗಳನ್ನು ಮಾಡುವಾಗ ಗಮನಿಸಬೇಕಾದ ವಿವಿಧ, ಪ್ರಮುಖ ಆಯಾಮಗಳನ್ನು ಉದಾಹರಣೆಗಳೊಂದಿಗೆ ವಿವರಿಸಿರುವ ಈ ಕೈಪಿಡಿಯ ಅಂಶಗಳನ್ನು ಇಲ್ಲಿ ಪ್ರಸ್ತಾವಿಸಿ ಪರಿಚಯಿಸಲಾಗಿದೆ.

ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ತಮ್ಮ ಕ್ಷೇತ್ರಾನುಭವಗಳನ್ನು ದಾಖಲಿಸ ಹೊರಡುವ ಕಾರ್ಯಕರ್ತರಿಗೂ ಇದು ಮಾರ್ಗದರ್ಶಿ ಪುಸ್ತಕವೇ ಆಗಿದೆ.

ಪ್ರಮುಖ ಪದಗಳು: ಶೈಕ್ಷಣಿಕ ಬರವಣಿಗೆ–Academic writing, ಯಥೋಕ್ತಿ–quotations, ಬರವಣಿಗೆ ಸಮಸ್ಯೆಗಳು– writing issues, ಬರವಣಿಗೆಯ ನಿಖರತೆ– accuracy in writing.

ಬೈಲಿ ಅವರ ಶೈಕ್ಷಣಿಕ ಬರವಣಿಗೆ ಕುರಿತಾದ ಈ ಕೈಪಿಡಿಯು ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿರುವ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಒಂದು ಅತ್ಯುತ್ತಮವಾದ ಸಂಪನ್ಮೂಲವಾಗಿದೆ. ಸ್ಟೀಫನ್ ಬೈಲಿಯವರು, ಬೋಧನೆ ಹಾಗೂ ಸಂಶೋಧನೆಯಲ್ಲಿ ಬಹುಕಾಲ ತೊಡಗಿಕೊಂಡಿದ್ದವರೂ ಮತ್ತು ಪರಿಣತ ವೃತ್ತಿವಂತರೂ ಆಗಿದ್ದಾರೆ. ಈ ಪುಸ್ತಕವು, ಸ್ಥಳೀಯರು ಮಾತನಾಡುವಂತಹ ನೈಪುಣ್ಯದಿಂದ ಇಂಗ್ಲಿಷ್ ಮಾತನಾಡಲು ಬಾರದ ವಿದ್ಯಾರ್ಥಿಗಳಿಗೆ ಕೋರ್ಸಿನ ಅವಧಿಯಲ್ಲಿ ಪೂರ್ಣಮಾಡಿ ಸಲ್ಲಿಸಬೇಕಿರುವ ವ್ಯಾಸಂಗಾವಧಿ ಬರಹ, ಪ್ರಾಜೆಕ್ಟ್ ವರದಿ, ಪ್ರೌಢಪ್ರಬಂಧಗಳಂತಹ ಶೈಕ್ಷಣಿಕ ಬರವಣಿಗೆಗಳನ್ನು ಸಿದ್ಧಪಡಿಸಲು ನೆರವಾಗುವಂತೆ ಇದೆ. ಪುಸ್ತಕದ ಮೊದಲ ಪುಟಗಳಲ್ಲಿಯೇ ಸ್ಪಷ್ಟವಾಗುವಂತೆ ಈ ಕೈಪಿಡಿಯನ್ನು ಯೂರೋಪ್ ಹಾಗೂ ಉತ್ತರ ಅಮೆರಿಕಗಳಲ್ಲಿರುವ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆಂದೇ ಬರೆಯಲಾಗಿದೆ. ಆದರೆ, ಜಗತ್ತಿನ ಯಾವುದೇ ಭಾಗದಲ್ಲಿರುವ, ಇಂಗ್ಲಿಷಿನಲ್ಲಿ ಗಂಭೀರವಾದ ಶೈಕ್ಷಣಿಕ ಬರವಣಿಗೆಯನ್ನು ಮಾಡಲು ಸಹಾಯ ಬೇಡುವ ಎಲ್ಲ ವಿದ್ಯಾರ್ಥಿಗಳಿಗೂ ಇದು ಸಹಾಯಕವಾಗುತ್ತದೆ ಎಂದು ಹೇಳಲಾಗಿದೆ. ಪುಸ್ತಕದಲ್ಲಿ ಚರ್ಚಿಸಲಾದ ವಿಷಯಗಳು ಹಾಗೂ ಅಂಶಗಳು ಇಂಗ್ಲಿಷ್ ಭಾಷೆಯನ್ನು ಸ್ಥಳೀಯವಾಗಿ ಮಾತನಾಡುವವರಿಗೂ ಸಹಾಯವಾಗುವಂತೆ ಇವೆ. ಬರವಣಿಗೆ ಎಂಬುದು ಯಾವುದೇ ಒಂದು ಕೋರ್ಸಿನ ಆವಶ್ಯಕವಾದ ಭಾಗವಾಗಿದೆ. ಯಾವುದೇ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಪರಿಣಾಮಕಾರಿ ಹಾಗೂ ಪ್ರಸ್ತುತವಾದ ಬರವಣಿಗೆಯನ್ನು

ಮಾಡಲು ಕಲಿಯುವುದು ಪ್ರತಿ ವಿದ್ಯಾರ್ಥಿಯ, ಅದರಲ್ಲೂ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಕಾಳಜಿಯಾಗಿರುತ್ತದೆ. ಇಂಗ್ಲಿಷಿನಲ್ಲಿ ಬೋಧಿಸಲಾಗುವ ಎಲ್ಲ ಶೈಕ್ಷಣಿಕ ಕಾರ್ಯಕ್ರಮಗಳ ಆವಶ್ಯಕತೆಗಳನ್ನು ಗುರುತಿಸುವ ಈ ಪುಸ್ತಕವು ಬಹಳ ಉಪಯುಕ್ತ ಪರಿಹಾರಗಳನ್ನು ಮುಂದಿಡುತ್ತದೆ.

ಈ ಪುಸ್ತಕವನ್ನು ನಾಲ್ಕು ವಿಶಾಲ ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಮೊದಲ ಎರಡು ಭಾಗಗಳು ಅಂದರೆ, ಪುಸ್ತಕದ ಮೊದಲ ಅರ್ಧಭಾಗವು ಬರವಣಿಗೆಯ ಪ್ರಾಥಮಿಕ ವಿಷಯಗಳಿಗೆ ಗಮನಕೊಡುತ್ತದೆ. ಮೂರನೇ ಹಾಗೂ ನಾಲ್ಕನೇ ಭಾಗವು, ಅಂದರೆ ಪುಸ್ತಕದ ಉತ್ತರಾರ್ಧ ಭಾಗವು, ಉದಾಹರಣೆಗಳ ಸಹಿತವಾಗಿ ಪುನರಧ್ಯಯನ, ಪುನರವಲೋಕನ ಮತ್ತು ಪರಾಮರ್ಶೆಗಳಂತಹ ಬರವಣಿಗೆಯ ಸೂಕ್ಷ್ಮ ವಿವರಗಳ ಕಡೆಗೆ ವಿದ್ಯಾರ್ಥಿಗಳನ್ನು ಕೊಂಡೊಯ್ಯುತ್ತದೆ. ಈ ನಾಲ್ಕು ಭಾಗಗಳನ್ನು ೬೧ ಉಪವಿಭಾಗಗಳಾಗಿ ಸಂರಚಿಸಿ, ಅಲ್ಲಿ ಬರವಣಿಗೆ ಮಾಡುವಾಗ ಎದುರಾಗುವ ಪ್ರಾಯೋಗಿಕ ಮತ್ತು ಸಾಮಾನ್ಯ ತೊಡಕುಗಳನ್ನು ಚರ್ಚಿಸಲಾಗಿದೆ. ಪ್ರತಿ ಉಪವಿಭಾಗವೂ ಬರವಣಿಗೆಯ ಒಂದು ಪ್ರಮುಖ ಅಂಶದ ಮೇಲೆ ಗಮನ ಕೊಡುತ್ತದೆ ಮತ್ತು ಚಟುವಟಿಕೆಗಳನ್ನು ಹಾಗೂ ಉತ್ತರಗಳನ್ನೂ ಒಳಗೊಂಡಿದೆ. ಈ ಪುಸ್ತಕವು ಬರವಣಿಗೆಯ ಪ್ರತಿಅಂಶವನ್ನೂ, ಅಂದರೆ ಪರಿಕಲ್ಪನೆಯನ್ನು ರೂಪಿಸುವುದರಿಂದ ಹಿಡಿದು ಪಠ್ಯದ ಕರಡು, ಕಾಗುಣಿತ ಮತ್ತು ಹೊರ ವಿನ್ಯಾಸವನ್ನು ತಿದ್ದುವವರೆಗಿನ ಎಲ್ಲ ಅಂಶಗಳನ್ನೂ ವಿವರಿಸುತ್ತದೆ. ಶೈಕ್ಷಣಿಕ ಬರವಣಿಗೆಯಲ್ಲಿ ಹೇಗೆ ತಾತ್ಪರ್ಯವನ್ನು ಸೂಚಿಸುವುದು, ವಿಷಯಸೂಚಿ ಹಾಕುವುದು ಹಾಗೂ ಉಲ್ಲೇಖಗಳನ್ನು ಕೊಡುವುದು ಅತ್ಯಾವಶ್ಯಕ ಎಂಬುದನ್ನು ತಿಳಿಸಿಕೊಡುತ್ತದೆ. ಅರುವತ್ತೊಂದು ಉಪವಿಭಾಗಗಳಲ್ಲಿ ಇಪ್ಪತ್ತಮೂರು ಬರವಣಿಗೆಯ ನಿಖರತೆಯ ಬಗ್ಗೆಯೇ ಇದೆ. ಈ ಪುಸ್ತಕವು ಬಹಳ ವ್ಯವಸ್ಥಿತವಾಗಿ ಮುಂದುವರಿಯುತ್ತದೆ. ಮೊದಲ ಭಾಗದಲ್ಲಿರುವ ಮೂರು ವಿಶಾಲ ಕ್ಷೇತ್ರಗಳೂ ಬರವಣಿಗೆಯ ಅಡಿಪಾಯವಾಗಿರುವ ಅಂಶಗಳನ್ನು ಚರ್ಚಿಸುತ್ತವೆ. ಕೃತಿಚೌರ್ಯದ ಬಗ್ಗೆ ಹೇಳುತ್ತಾ ಅದನ್ನು ಹೇಗೆ ದೂರವಿಡಬಹುದು ಎಂಬುದನ್ನು ಸಮಗ್ರವಾಗಿ ತಿಳಿಸುತ್ತದೆ. ಕೃತಿಚೌರ್ಯಕ್ಕೆ ಸಂಬಂಧಿಸುವ ವಿಷಯಗಳು ಶೈಕ್ಷಣಿಕ ಬರವಣಿಗೆಗಳಲ್ಲಿ ಬಹಳ ಪ್ರಮುಖ ಆಗುವುದರಿಂದ, ಅದರ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವನ್ನು ಮೂಡಿಸುವ ಕಾರ್ಯವನ್ನು ಈ ಪುಸ್ತಕವು ಗಂಭೀರವಾಗಿ ಕೈಗೆತ್ತಿಕೊಂಡಿದೆ. ಅದೇ ವಿಭಾಗದಲ್ಲಿ, ಒಂದು ನಿರ್ದಿಷ್ಟ ಲೇಖನದ ಗುರಿಯ ಸುತ್ತ ಓದಬೇಕಾದ ಸಾಮಗ್ರಿಗಳನ್ನು ಕುರಿತೂ ಸೂಚನೆಗಳಿವೆ. ಒಂದು ನಿರ್ದಿಷ್ಟ ನಮೂನೆಯ ಬರವಣಿಗೆಗೆ ತಯಾರಾಗುವಲ್ಲಿ ಟಿಪ್ಪಣಿ ಮತ್ತು ವಿಷಯ ಸಾರಸಂಗ್ರಹಗಳನ್ನು ಮಾಡಿಕೊಳ್ಳುವುದು

ಮುಖ್ಯ ಹಂತಗಳಲ್ಲಿ ಸೇರಿಕೊಳ್ಳುತ್ತದೆ. ಈ ಭಾಗದಲ್ಲಿ ಇದನ್ನು ನಿರ್ಣಾಯಕವಾಗಿ ಸ್ಪಷ್ಟಪಡಿಸಲಾಗಿದೆ. ಯಾವುದೇ ಗಮನ ಸೆಳೆಯುತಕ್ಕ ಬರವಣಿಗೆಗೂ ಪರಿಣಾಮಕಾರಿಯಾದ ಟಿಪ್ಪಣಿಗಳನ್ನು ಹಾಗೂ ಅರ್ಥಪೂರ್ಣವಾದ ತಾತ್ಪರ್ಯ ಸಂಗ್ರಹವನ್ನು ಮಾಡಿಕೊಳ್ಳುವುದು ನಿರ್ಣಾಯಕವಾಗುತ್ತದೆ. ಒಂದು ಬರವಣಿಗೆಯನ್ನು ಸಂರಚಿಸಲು ಟಿಪ್ಪಣಿಗಳು ನೆರವಾದರೆ, ತಾತ್ಪರ್ಯಗಳು ಪಠ್ಯದೊಳಗಿನ ಮುಖ್ಯ ಅಂಶಗಳನ್ನು ಉಳಿಸಿಕೊಂಡು ಬೇಕಾದ ಬದಲಾವಣೆಯನ್ನು ಮಾಡಿಕೊಳ್ಳಲು ನೆರವಾಗುತ್ತದೆ. ಮುಂದುವರಿಯುತ್ತಾ, ಬರವಣಿಗೆಯ ಮುಂದಿನ ಹಂತಗಳಾದ ಯೋಜನೆ ಮಾಡುವುದು, ಮುಖ್ಯ ಭಾಗಗಳಲ್ಲಿ ಬರಬೇಕಾದ ವಿಷಯಗಳು, ಪ್ರಸ್ತಾವನೆ ಹಾಗೂ ಮುಕ್ತಾಯಗಳನ್ನು ಬರೆಯುವುದರ ಬಗ್ಗೆ ತಿಳಿಸುತ್ತದೆ. ಜೊತೆಗೆ ಕರಡು ತಿದ್ದುವಿಕೆ ಹಾಗೂ ಅಗತ್ಯವಿರುವ ಭಾಗಗಳನ್ನು ಮತ್ತೊಮ್ಮೆ ಬರೆಯುವ ವಿಚಾರಗಳ ಬಗ್ಗೆ ಗಂಭೀರವಾದ ಸೂಚನೆಗಳನ್ನು ನೀಡುತ್ತದೆ. ಪುಸ್ತಕದ ಮುಂದಿನ ಭಾಗವು ಹೆಚ್ಚು ಅಮೂರ್ತವಾದ ಅಂಶಗಳನ್ನು ಎತ್ತಿಕೊಳ್ಳುತ್ತದೆ. ಮುಂದೆ, ಪ್ರಬಂಧ ಒಂದರ ಮೊದಲಿಗೆ ಶೀರ್ಷಿಕೆಯಲ್ಲಿರುವ ನಿರ್ಣಾಯಕ ಪದವನ್ನು ವ್ಯಾಖ್ಯಾನಿಸುವುದನ್ನು ಕುರಿತು, ಮುಖ್ಯ ವಿಷಯವನ್ನು ಸಾಮಾನ್ಯೀಕರಿಸುವುದನ್ನು (generalize) ಕುರಿತು, ಪರಿಶೀಲನೆಗೆ ಒಳಪಡಿಸುವ ಮುಖ್ಯ ಕ್ಷೇತ್ರಕ್ಕೆ ಸಂಬಂಧಿಸಿ ಉದಾಹರಣೆಗಳನ್ನು ನೀಡುವುದನ್ನು ಕುರಿತು, ಯಥೋಕ್ತಿಗಳನ್ನು (quotations) ನೀಡುವುದನ್ನು ಕುರಿತು, ಇತರ ಬರಹಗಾರರನ್ನು ಉಲ್ಲೇಖಿಸುವುದನ್ನು ಕುರಿತು, ಮತ್ತು ಶೈಲಿಯ ಬಗ್ಗೆ ಕಾಳಜಿವಹಿಸುವುದನ್ನು ಕುರಿತು ಹೇಳುತ್ತದೆ. ಮೂರನೇ ಭಾಗದಲ್ಲಿ ಪುಸ್ತಕವು ನಿಖರತೆಯ ಬಗ್ಗೆ ಚರ್ಚಿಸುತ್ತದೆ. ಪ್ರಬಂಧಕ್ಕೆ ನಿಖರತೆಯ ಗುಣವು ಮಹತ್ತ್ವದ್ದು ಆಗಿರುತ್ತದೆ. ಇಂಗ್ಲಿಷು ಸ್ಥಳೀಯ ಭಾಷೆ ಅಲ್ಲದವರು ಮಾಡಹುದಾದ ತಪ್ಪುಗಳ ಕ್ಷೇತ್ರವನ್ನು ಆಧಾರಪೂರ್ಣ ಮತ್ತು ನಿರ್ಣಾಯಕ ಉದಾಹರಣೆಗಳೊಂದಿಗೆ ವಿದ್ಯಾರ್ಥಿಗಳಿಗೆ ಪರಿಚಯಿಸುವುದನ್ನು ಈ ಭಾಗವು ಮಾಡುತ್ತದೆ. ಬರವಣಿಗೆಯೊಂದು ಕ್ಷುಲ್ಲಕವೆಂದು ಕಾಣಬಹುದಾದ್ದನ್ನು ಸ್ವಲ್ಪ ಜಾಗರೂಕತೆ ವಹಿಸುವುದರ ಮೂಲಕ ಹೇಗೆ ತಪ್ಪಿಸಬಹುದು ಎಂಬುದನ್ನು ತೋರಿಸಿಕೊಡುತ್ತದೆ. ಕೊನೆಗೆ, ಬರವಣಿಗೆಯೊಂದರ ಕರಡನ್ನು ಹೇಗೆ ತಿದ್ದುವುದು ಎಂಬ ಬಗ್ಗೆ ಗಮನ ಸೆಳೆಯುತ್ತದೆ. ಎಚ್ಚರದಿಂದ ಮಾಡುವ ಕರಡು ತಿದ್ದುವ ಕೆಲಸವು ಬಹಳಷ್ಟು ತಪ್ಪುಗಳನ್ನು ತೊಡೆದುಹಾಕುತ್ತದೆ. ಕೈಪಿಡಿಯ ಕೊನೆಯ ಭಾಗದಲ್ಲಿ, ಮೂರೂ ಭಾಗಗಳಲ್ಲಿ ಸೂಚಿಸಲಾದ ಎಲ್ಲ ಸಲಹೆಗಳನ್ನು ವಿವಿಧ ರೀತಿಯ ಬರವಣಿಗೆಗಳ ಉದಾಹರಣೆ ಮತ್ತು ಮಾದರಿಗಳ ಮೂಲಕ ಸ್ಪಷ್ಟಪಡಿಸುತ್ತದೆ.

ಈ ಕೈಪಿಡಿಯು ಯಾವುದೇ ವಿಷಯದ ಕೋರ್ಸ್ ಅಥವಾ ಶೈಕ್ಷಣಿಕ ಕಾರ್ಯಕ್ರಮಕ್ಕೂ – ಅದು ಯಾವುದೇ ಸ್ವರೂಪದ್ದು ಅಥವಾ ಅವಧಿಯದ್ದು ಇದ್ದರೂ – ಒಪ್ಪಿಗೆಯಾಗುವಂತೆ ಇದೆ. ಇದರಿಂದ ಬರವಣಿಗೆಯಲ್ಲಿ ಹೆಚ್ಚುಗಾರಿಕೆಯನ್ನು ಸಾಧಿಸುವುದಕ್ಕೆ ಮತ್ತು ಒಂದು ಉತ್ತಮ ಬರವಣಿಗೆಯನ್ನು ಹೇಗೆ ಬೆಳೆಸಿಕೊಳ್ಳಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವುದಕ್ಕೆ ಸಹಾಯವಾಗುತ್ತದೆ.

* * *

ಚಿಂತನಾತ್ಮಕ ಪ್ರಶ್ನೆಗಳು:

೧. ಶೈಕ್ಷಣಿಕ ಬರವಣಿಗೆಯ ಸಂರಚನೆಯ ವಿವಿಧ ಅಂಶಗಳು – ಈ ಲೇಖನದಲ್ಲಿ ಪ್ರಸ್ತಾವಿಸಲಾದವು – ಯಾವುವು? ಚರ್ಚಿಸಿ ಮತ್ತು ವಿಸ್ತರಿಸಿ.

೨. ಶೈಕ್ಷಣಿಕ ಬರವಣಿಗೆಯ ವಿಶೇಷ ಲಕ್ಷಣಗಳನ್ನು – ಈ ಪರಿಚಯ ಲೇಖನದಲ್ಲಿ ನಮೂದಿಸಿರುವ – ಪಟ್ಟಿಮಾಡಿ ಚರ್ಚಿಸಿ. (ನಿಖರತೆ, ಉಲ್ಲೇಖ, ಕರಡುತಿದ್ದುವುದು, ಕೃತಿಚೌರ್ಯ, ವಿಷಯಸೂಚಿ, ಇತ್ಯಾದಿ)

೩. ಈ ಪುಸ್ತಕದ ಅನ್ವಯಿಕತೆ ಕ್ಷೇತ್ರ ಕಾರ್ಯಕರ್ತರು ತಯಾರಿಸುವ ಅನುಭವ ದಾಖಲೆಗಳಿಗೂ ಇರಬಹುದೇ? ಚರ್ಚಿಸಿ.

೪. ಪುಸ್ತಕ ಪರಿಚಯದ ಈ ಲೇಖನದ ಮಹತ್ತ್ವವನ್ನು ಕುರಿತು ಚರ್ಚಿಸಿ.

ರಾಜೇಶ್‌ಕುಮಾರ್: ಅವರು ತಮ್ಮ ಪಿಎಚ್.ಡಿ.,ಯನ್ನು ಇಲಿನೋಯಿಸ್ ವಿಶ್ವವಿದ್ಯಾಲಯದಲ್ಲಿ ಮಾಡಿದ್ದಾರೆ. ಅವರು ಐಐಟಿ ಮದರಾಸಿನಲ್ಲಿ ಮಾನವಶಾಸ್ತ್ರ ಹಾಗೂ ಸಮಾಜವಿಜ್ಞಾನ ವಿಭಾಗದಲ್ಲಿ ಸಹಾಯಕ ಪ್ರೊಫೆಸರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಿನ್ಟ್ಯಾಕ್ಟಿಕ್‌ಥಿಯರಿ, ಸೋಶಿಯೊ ಲಿಂಗ್ವಿಸ್ಟಿಕ್ಸ್, ಭಾಷೆ ಹಾಗೂ ಶಿಕ್ಷಣ, ಮತ್ತು ಕಾಗ್ನಿಟೀವ್ ಸೈನ್ಸಸ್ (ಭಾಷೆ ಮತ್ತು ಮನುಷ್ಯನ ಮನಸ್ಸು) ಕುರಿತ ವಿಷಯಗಳಲ್ಲಿ ಸಂಶೋಧನೆ ಹಾಗೂ ಬೋಧನಾ ಕಾರ್ಯಗಳು ಅವರ ಆಸಕ್ತಿಯ ಕ್ಷೇತ್ರಗಳಾಗಿವೆ. thisisrajkumar@gmail.com

ಅನುವಾದ: ಉಷಾ / **ಪರಿಶೀಲನೆ:** ರಾಮಕೃಷ್ಣ ಭಟ್

ಮೂಲ: *Language and Language Teaching,* Volume 3 Number 1 Issue 5 January 2014.